# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು ರವರ ಕಛೇರಿ, ರಾಜರಾಜೇಶ್ವರಿನಗರ ವಿಭಾಗ, ರಾಜರಾಜೇಶ್ವರಿನಗರ ವಲಯ.

ಸಂಖ್ಯೆ:ಕಾ.ಪಾ.ಅ/ರಾರಾನವಿ/ಎಸ್‌ಡಬ್ಲೂಎಂ/wo/ 01/12-13 ದಿನಾಂಕ:30-11-2012

## "ಕಾರ್ಯಾದೇಶ ಪತ್ರ"

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯದ ವ್ಯಾಪ್ತಿಯ ಪ್ಯಾಕೇಜ್ ಆರ್-1 (ವಾರ್ಡ್ ಸಂಖ್ಯೆ:129-ಜ್ಞಾನಭಾರತಿ ಮತ್ತು 160-ರಾಜರಾಜೇಶ್ವರಿನಗರ ಕ್ಕೆ) ಅಹ್ವಾನಿಸಿರುವ ಘನತ್ಯಾಜ್ಯ ನಿರ್ವಹಣೆಗೆ ಕಾರ್ಯಾದೇಶ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ನಅಇ 745 ಎಂಎನ್‌ವೈ 12 ದಿನಾಂಕ:18-09-2012
2. ಮಾನ್ಯ ಅಯುಕ್ತರ ಆದೇಶ ಪತ್ರದ ಸಂಖ್ಯೆ:ಅಯುಕ್ತರು/ಪಿ.ಎಸ್.ಆರ್/(4)6544/2012-13 ದಿನಾಂಕ:18-09-2012.
3. ರಾಜ್ಯ ಟೆಂಡರ್ ಬುಲೇಟಿನ್ ಪತ್ರದ ಸಂಖ್ಯೆ:UDD/748/MNY/2012 ದಿನಾಂಕ: 21-09-2012.
4. ಟೆಂಡರ್ ಅಧಿಸೂಚನೆ ಸಂಖ್ಯೆ: EE (P)/RRN/SWM/TEND/E-Proc/03/2012-13 ದಿನಾಂಕ:18-09-2012.
5. ಪತ್ರಿಕಾ ಪ್ರಕಟಣೆ ದಿನಾಂಕ:19-09-2012.
6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ತಿರ್ಮಾನದ ಅಧಿಕ ವಿಷಯದ ಸಂಖ್ಯೆ 01(279)/2012-13,ದಿನಾಂಕ:30-10-2012.
7. ಒಪ್ಪಿಗೆ ಪತ್ರದ ಸಂಖ್ಯೆ: ಕಾಪಾಅ(ಯೋ)/ರಾರಾನ/ಎಸ್‌ಡಬ್ಲೂಎಂ/LOA/01/12-13 ದಿನಾಂಕ:02-11-2012.
8. ಮೆ॥ ಬಿವಿಜಿ ಇಂಡಿಯಾ ಲಿ.ರವರು (ಐಡಿಬಿಐ ಬ್ಯಾಂಕ್. ಟ್ರೇಡ್ ಫೈನಾನ್ಸ್ ಡಿಪಾರ್ಟ್‌ಮೆಂಟ್, ಸ್ಪೇಷಲೈಸ್ಡ್ ಕಾರ್ಪೋರೇಟ್ ಶಾಖೆ) ದಿನಾಂಕ 16-11-2012ರಂತೆ ನೀಡಿರುವ ಕಾರ್ಯಾಧಾರಿತ ಭದ್ರತಾ ಠೇವಣಿ ರೂ.7,30,522/-ಗಳಿಗೆ ದಿನಾಂಕ:25-02-2016 ರವರೆಗೆ ಚಾಲನೆಯಲ್ಲಿರುವಂತೆ.
9. ಸರ್ಕಾರದ ಆದೇಶ ಸಂಖ್ಯೆ: ನಅಇ 793 ಎಂಎನ್‌ವೈ 12 ದಿನಾಂಕ:21-11-2012
10. ಘನತ್ಯಾಜ್ಯ ನಿರ್ವಹಣೆಯ ಸಂಬಂಧ ದಿನಾಂಕ:01-12-2012ರಿಂದ ಜಾರಿಗೆ ಬರುವಂತೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ಸಂಖ್ಯೆ:-01/12-13, ದಿನಾಂಕ:-30-11-2012.

**********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ರೀತ್ಯಾ, ಗುತ್ತಿಗೆ ಷರತ್ತು ಮತ್ತು ನಿಬಂಧನೆಗಳಂತೆ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ಸಾಗಣೆ) ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ಪ್ಯಾಕೇಜ್ ಸಂಖ್ಯೆ ಆರ್-1 ಕ್ಕೆ 129-ಜ್ಞಾನಭಾರತಿ ಮತ್ತು 160-ರಾಜರಾಜೇಶ್ವರಿನಗರ ವಾರ್ಡ್‌ನ ರಾಜರಾಜೇಶ್ವರಿನಗರ ಉಪ ವಿಭಾಗದಲ್ಲಿ ತಮ್ಮ ಗುತ್ತಿಗೆಯು ಅಂಗೀಕೃತವಾಗಿರುತ್ತದೆ. ತಾವು ನೀಡಿರುವ ಕಾರ್ಯಯೋಜನೆಯಂತೆ ಪ್ರತಿ ದಿನ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸಲು ಮಾಸಿಕ ಗುತ್ತಿಗೆ ಮೊತ್ತ ರೂ.30,43,840/-ರಂತೆ (ರೂ.ಮೂವತ್ತು ಲಕ್ಷದ ನಲವತ್ತ ಮೂರು ಸಾವಿರದ ಎಂಟು ನೂರ ನಲವತ್ತು ರೂಪಾಯಿಗಳು ಮಾತ್ರ) ತಮಗೆ ದಿನಾಂಕ:01-12-2012 ರಿಂದ ಜಾರಿಗೆ ಬರುವಂತೆ ಕಾರ್ಯಾದೇಶ ನೀಡಲಾಗಿದೆ. ಸದರಿ ಕಾರ್ಯಾದೇಶವು ದಿನಾಂಕ: 01-12-2012 ರಿಂದ ದಿನಾಂಕ:30-11-2015 ರವರೆಗೆ ಚಾಲ್ತಿಯಲ್ಲಿರುತ್ತದೆ.

168

**ಕಾರ್ಯಯೋಜನೆಯಂತೆ ಒದಗಿಸಬೇಕಾದ ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳು**

1) ಕಾರ್ಮಿಕರು : 110
2) ಮೇಲ್ವಿಚಾರಕರು : 15
3) ತಳ್ಳುವ ಗಾಡಿ : 25
4) ಆಟೋಟಿಪ್ಪರ್ : 20
5) ಟಿಪ್ಪರ್ ಲಾರಿ : 06
6) ಕಾಂಪ್ಯಾಕ್ಟರ್ : 02
7) ಕಾರ್ಮಿಕರ ಸಮವಸ್ತ್ರ ಮತ್ತು ಭದ್ರತಾ, ಸ್ವಚ್ಛತಾ ನಿರ್ವಹಣೆ ಸಲಕರಣೆಗಳು ಗುತ್ತಿಗೆದಾರರು 1ನೇ ಮಾಹೆಯ ಕೆಲಸಕ್ಕೆ ಬಿಲ್ ಸಲ್ಲಿಸುವ ಸಮಯದಲ್ಲಿ ಎಲ್ಲಾ ಕಾರ್ಮಿಕರಿಗೆ ಮಾಸಿಕ ವೇತನವನ್ನು ಚೆಕ್/ಇ.ಸಿ.ಎಸ್/ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಿರುವ ಬಗ್ಗೆ, ಇ.ಎಸ್.ಐ ಮತ್ತು ಪಿ.ಎಫ್ ನೊಂದಣಿ ಮಾಡಿಸಿರುವ ಹಾಗೂ ವಂತಿಕೆ ಪಾವತಿಸಿರುವ ಚಲನ್‌ನ ನಕಲು ಪ್ರತಿಯನ್ನು ಒದಗಿಸುವುದು ಹಾಗೂ ಇದೇ ಕ್ರಮವನ್ನು ಪ್ರತಿ ತಿಂಗಳು ಅನುಸರಿಸಲು ಸೂಚಿಸಲಾಗಿದೆ. ಹಾಗೂ ಗುತ್ತಿಗೆದಾರರು ಪ್ರತಿ ದಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಪ್ರಗತಿಯ ವರದಿಯನ್ನು ಸಲ್ಲಿಸಲು ಸೂಚಿಸಿದೆ.

ಈ ಕಾರ್ಯಾದೇಶವು ಗುತ್ತಿಗೆ ಕರಾರು ಷರತ್ತು ಮತ್ತು ನಿಬಂಧನೆಗಳು ಹಾಗೂ ಇನ್ನು ಮುಂದೆ ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ಕೆ ಸಂಬಂಧಿಸಿದಂತೆ ಪಾಲಿಕೆಯು ಆಗಿಂದಾಗ್ಗೆ ಕಛೇರಿ ಆದೇಶ/ಸುತ್ತೋಲೆಯಲ್ಲಿ ನೀಡುವ ಎಲ್ಲಾ ಸಲಹೆ/ಸೂಚನೆಗಳಿಗೆ ಒಳಪಟ್ಟಿರುತ್ತದೆ.

ಕಾರ್ಯಪಾಲಕ ಅಭಿಯಂತರರು
ರಾಜರಾಜೇಶ್ವರಿನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರಿಗೆ,**
**ಮೆ॥ ಬಿವಿಜಿ ಇಂಡಿಯಾ ಲಿ.,**
**ಬಿವಿಜಿ ಹೌಸ್, ನಂ.47,**
**ಮಿಲ್ಲರ್ಸ್ ಟ್ಯಾಂಕ್ ಬಂಡ್ ರೋಡ್,**
**ವಸಂತನಗರ, ಬೆಂಗಳೂರು-52.**

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಉಪ ಮಹಾಪೌರರ ಗಮನಕ್ಕೆ ತರಲು ಕೋರಲಾಗಿದೆ.
3. ಮಾನ್ಯ ಆಯುಕ್ತರರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.

167

5. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಮಾನ್ಯ ಅಪರ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
7. ಮಾನ್ಯ ಜಂಟಿ ಆಯುಕ್ತರು (ರಾಜರಾಜೇಶ್ವರಿನಗರ ವಲಯ) ರವರ ಅವಗಾಹನೆಗೆ ಸಲ್ಲಿಸಿದೆ
8. ಮುಖ್ಯ ಅಭಿಯಂತರರು(ರಾಜರಾಜೇಶ್ವರಿನಗರ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
9. ಅಧೀಕ್ಷಕ ಅಭಿಯಂತರರು (ರಾಜರಾಜೇಶ್ವರಿನಗರ ವಲಯ) ರವರ ಅವಗಾಹನೆಗೆ ಸಲ್ಲಿಸಿದೆ.
10. ಸಹಾಯಕ ನಿಯಂತ್ರಕರು(ಹಣಕಾಸು) ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
11. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
12. ಕಛೇರಿ ಕಡತಕ್ಕೆ.